“ನಾನು ನಿದ್ರಿಸಿಲ್ಲ...”

ಗಂಡ ನಕ್ಕ. ನಗುವಿನ ಶಬ್ದವನ್ನೂ ಬೆಳಕನ್ನೂ ಕಂಡ ಕೋಣೆಯೊಳಗಿದ್ದ ಕ್ರಿಮಿ–ಕೀಟಗಳು ಹಾರಿಹೋದವು.

ತಂತಿಗಳ ಮೇಲಿದ್ದ ಮಂಜಿನ ಹನಿಗಳು ಹೊಳೆದವು.

ಅವಳು ತುಟಿಗಳನ್ನು ನಡುಗಿಸಿಕೊಂಡು ಹೇಳಿದಳು:

“ನಾಳೆ! ನಾಳೆನೇ ನಾವು ಮತ್ತೊಂದು ಮನೆಯನ್ನು ಹುಡುಕಲಾರಂಭಿಸಬೇಕು!”

“ಇಷ್ಟೊಂದು ಸುಖ–ಸೌಕರ್ಯವಿರುವ ಮನೆ ಬಿಟ್ಟು ಮತ್ತೊಂದು ಮನೇನಾ!”

“ಈ ಮನೆಯ ಒಳಗೂ ಹೊರಗೂ ಕಾಗೆಗಳೇ ತುಂಬಿಕೊಂಡಿವೆ.”

ಆಗಲೂ ಆತ ನಕ್ಕ.

ಗಂಡನ ಕನ್ನಡಕವನ್ನು ಅದರ ಬಾಕ್ಸ್ ಸಮೇತ ಕಚ್ಚಿಕೊಂಡು ಹೋಗಿದೆ.

ನೆನಸಿಟ್ಟ ಬಟ್ಟೆಗಳಲ್ಲಿ ಮಲ ವಿಸರ್ಜನೆ ಮಾಡಿದ್ದವು.

ಬಚ್ಚಲುಮನೆಯಿಂದ ಸೋಪು, ಮೇಜಿನ ಮೇಲಿದ್ದ ಪೆನ್ನಿನ ಮುಚ್ಚಳ ಕಚ್ಚಿಕೊಂಡು ಹೋಗಿದ್ದವು.

ಅವರ ಮನೆಯ ಹೊಸ್ತಿಲಿನ ಮೇಲೆಲ್ಲ ಮಲ ವಿಸರ್ಜನೆಯ ರಂಗೋಲಿ ಹಾಕಲಾಗಿತ್ತು.

ಒಮ್ಮೆ ಬೆಳಗಿನ ಉಪಹಾರಕ್ಕೆ ತೆಗೆದಿಟ್ಟ ಆಹಾರದ ಮೇಜಿನ ಬಂದು ಕುಳಿತರೆ ಆಗ ಅವರಿಗೆ ಗೊತ್ತಾಗತ್ತೆ.

ಅವು ಅವಳ ತಲೆಯ ಮೇಲೆ ಬಂದು ಕುಳಿತವು, ಹಣೆಮೇಲೆ ಉಗುರುಗಳಿಂದ ಗಾಯಗೊಳಿಸಿದವು. ಕಣ್ಣಿನ ಹತ್ತಿರ ಪರಚಿದವು. ಆತನಿಗೆ ಏನೂ ಗೊತ್ತಾಗಲೇ ಇಲ್ಲ. ಆತನ ದೇಹ ದಿನದಿಂದ ದಿನಕ್ಕೆ ದಪ್ಪವಾಗುತ್ತಾ ಹೋಯಿತು.

ಕಾಗೆಗಳ ಕಣ್ಣು ತಪ್ಪಿಸಿ ಕಾಯ್ದಿಟ್ಟುಕೊಂಡಿದ್ದ ಆಹಾರ ಪದಾರ್ಥಗಳನ್ನೆಲ್ಲ, ಆ ಕಾಗೆಗಳು ತಮ್ಮ ಕೈವಶ ಮಾಡಿಕೊಂಡವು. ಇದರಿಂದಾಗಿ ಅವಳು ಉಪವಾಸ ಬಿದ್ದು ಕ್ಷೀಣಿಸ ತೊಡಗಿದಳು. ಬಿಳಿಚಿಗೊಂಡು ಕೆನ್ನೆಗಳು ಬತ್ತಿದವು.

ಕೊನೆಗೆ ಆತ ಸಮ್ಮತಿಸಿದ.

“ಹೌದು, ಈ ಕಡಲತೀರ ನಿನಗ್ಯಾಕೊ ಹಿಡಿಸ್ತಾ ಇಲ್ಲ, ಶ್ಯಾಮಲಾ. ನಾವು ಸ್ವಂತಕ್ಕಾಗಿ ಒಂದು ಹೊಸ ಮನೆಯನ್ನೇ ಕಟ್ಟೋಣ!”

ಸೋತವನ ಸಂಕಟದ ಧ್ವನಿಯಂತೆ ಆತನ ಶಬ್ದವು ಪೊಳ್ಳಾಗಿತ್ತು.

ಈ ರೀತಿ ಆದ ನಂತರ, ಅವರು ಮನೆ ಕಟ್ಟುವುದರ ಬಗ್ಗೆ ತೀರ್ಮಾನ ತೆಗೆದುಕೊಂಡರು.

ಕಡಲಿನ ಗಾಳಿ ತಲುಪದ ಭೂಮಿ, ಸಮತಟ್ಟಾದ, ಒಂದೇ ಒಂದು ಗಿಡವೂ ಇಲ್ಲದ, ಹುಲ್ಲು ಸಹ ಬೆಳೆಯದ, ಕಲ್ಲುಬಂಡೆಗಳಿಲ್ಲದ, ಉದ್ದ ಅಗಲ ಸರಿ ಹೊಂದುವಂತಹ, ತುಂಬಾ ಒಳ್ಳೆಯ ಲಕ್ಷಣಗಳನ್ನೇ ತುಂಬಿಕೊಡಿರುವ ಒಂದು ಫ್ಲ್ಯಾಟ್. ಸಮಕೋನಗಳಲ್ಲಿ ಮಾತ್ರ ರೇಖೆಗಳು ಒಂದಕ್ಕೊಂದು ಸೇರುವ ನೆಲ. ಮನೆಯ ಪ್ಲಾನು ಹೇಗಿರಬೇಕೆಂದುಕೊಂಡಿದ್ದು, ಬ್ಲೂ–ಪ್ರಿಂಟ್ ತಯಾರು ಮಾಡಿದ್ದು, ಕಂಟ್ರಾಕ್ಟುದಾರನ ಹತ್ತಿರ ಸವಿಸ್ತಾರವಾಗಿ ಚರ್ಚೆ ನಡೆಸಿದ್ದೆಲ್ಲವೂ ಅವಳೆ.

ಅವಳಲ್ಲಿ ಉಂಟಾದ ಬದಲಾವಣೆಗಳು ಆತನಿಗೆ ಸಂತೋಷವನ್ನುಂಟುಮಾಡಿದವು. ಆದರೆ, ನಗರದ ಇವರ ಜೊತೆಗಾರರು ಮಾತ್ರ ಗಾಬರಿಗೊಂಡರು. ಹೀಗೆ ನೀವು ನಮ್ಮನ್ನು ಬಿಟ್ಟು ಒಂಟಿ ಕುಟುಂಬದೊಂದಿಗೆ ಹೋಗಬಾರದೆಂದೂ ಈ ರೀತಿಯ ಒಂಟಿ ಕುಟುಂಬವು ನಿಮಗೆ ನಾಳೆ ಭಾರವಾಗುವುದೆಂದೂ ಹೇಳಿದರು. ನಮ್ಮನ್ನಗಲಿ ನೀನು ಹೋದರೆ ನಿನಗೆ ನಗುವುದಕ್ಕೆ ಸಾಧ್ಯವಾಗುತ್ತದೆಯೇ? ನಿನಗೊಂದು ಮಗು ಹುಟ್ಟಿದರೆ, ಆಡಲು ಜೊತೆಗಾರರಿಲ್ಲದೆ ಆ ಮಗುವಿನ